# ಅಭ್ಯರ್ಥಿಗಳಿಗೆ ಸೂಚನೆಗಳು

2020-21ನೇ ಸಾಲಿನ ಬಿ.ಇಡಿ ಕೋರ್ಸಿನ ವ್ಯಾಸಂಗಕ್ಕಾಗಿ ಅರ್ಹ ಅಭ್ಯರ್ಥಿಗಳ ದಾಖಲಾತಿ ಸಂಬಂಧ ಸರ್ಕಾರಿ ಕೋಟಾದಡಿ ಲಭ್ಯವಿರುವ ಸೀಟುಗಳಿಗೆ ದಿನಾಂಕ: 04-03-2021ರಂದು ಪ್ರಕಟಿಸಿದ ಕಾಲೇಜು ಸಹಿತ ಸೀಟು ಹಂಚಿಕೆಯ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳು ತಮಗೆ ಹಂಚಿಕೆಯಾದ ಕಾಲೇಜಿಗೆ ದಾಖಲಾತಿ ಬಯಸದ ಅಭ್ಯರ್ಥಿಗಳಿಗಿರುವ ಗೊಂದಲ ನಿವಾರಿಸುವ ಬಗ್ಗೆ:

ದಿನಾಂಕ: 04-03-2021ರಂದು ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಿದ ಅಭ್ಯರ್ಥಿಗಳಿಗೆ ಸೂಚನೆಗಳನ್ನು ನೀಡಲಾಗಿದ್ದು, ಅದರ ಮುಂದುವರೆದ ಭಾಗವಾಗಿ ಕೆಳಕಂಡ ಅಂಶಗಳನ್ನು ಗಮನಿಸುವುದು.

1. ಅಭ್ಯರ್ಥಿಗಳು ತಮಗೆ ಹಂಚಿಕೆಯಾಗಿರುವ ಕಾಲೇಜಿಗೆ ದಾಖಲಾತಿ ಹೊಂದಲು ಬಯಸದಿದ್ದಲ್ಲಿ ದಾಖಲಾತಿ ಶುಲ್ಕ ಪಾವತಿ ಮಾಡಬಾರದು. ಅಂತಹ ಅಭ್ಯರ್ಥಿಗಳನ್ನು ಮುಂದಿನ ಸೀಟು ಹಂಚಿಕೆ ಪ್ರಕ್ರಿಯೆಗೆ ಪರಿಗಣಿಸಲಾಗುವುದು.
2. ಮೊದಲ ಸುತ್ತಿನ ಪ್ರಕ್ರಿಯೆ ಪೂರ್ಣಗೊಂಡ ನಂತರ ಡಯಟ್/ಸಿ.ಟಿ.ಇ ಗಳಿಂದ ಸಲ್ಲಿಸಲಾದ ಕಂಟ್ರೋಲ್ ಶೀಟುಗಳನ್ನಾಧರಿಸಿ [Institution wise remaining seats (category wise)] Seat Matrix ಅನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗುವುದು.
3. ಸದರಿ Seat Matrix ಅನ್ನು ಅತ್ಯಂತ ಜಾಗರೂಕತೆಯಿಂದ ಗಮನಿಸಿ ಅಭ್ಯರ್ಥಿಯು ತಾನು ದಾಖಲಾಗಲು ಬಯಸುವ ಕಾಲೇಜಿಗೆ ಆದ್ಯತೆ/ ಆಯ್ಕೆಗಳನ್ನು ದಾಖಲಿಸುವುದು.
4. ಈ ರೀತಿ ಅಭ್ಯರ್ಥಿಗಳು ಎರಡನೇ ಸುತ್ತಿನ ಆಯ್ಕೆಗೆ Seat Matrix ಅನ್ವಯ ನೀಡಿದ ಕಾಲೇಜಿನ ಆಯ್ಕೆಗಳನ್ನು ಪರಿಗಣಿಸಿ ಲಭ್ಯವಿರುವ ಸೀಟುಗಳನ್ನು ಮೆರಿಟ್ ಹಾಗೂ ರೋಸ್ಟರ್ ಅನ್ವಯ ಹಂಚಿಕೆ ಮಾಡಲಾಗುವುದು.
5. ಒಂದು ವೇಳೆ Option Entry ಮಾಡಲು ನೀಡಿರುವ ಅವಕಾಶವನ್ನು ಬಳಸಿಕೊಳ್ಳದೇ ಕಾಲೇಜುಗಳ ಆಯ್ಕೆಗಳನ್ನು ದಾಖಲಿಸದೇ ಇದ್ದಲ್ಲಿ, ಆನ್ ಲೈನ್ ಅರ್ಜಿಯಲ್ಲಿ ತಾವು ದಾಖಲಿಸಿದ ಕಾಲೇಜಿನ ಆಯ್ಕೆಯಂತೆ ಹಂಚಿಕೆ ಮಾಡಲಾಗುವುದು.
6. ಮೊದಲನೇ ಸುತ್ತಿನ ಆಯ್ಕೆ ಪಟ್ಟಿಯಲ್ಲಿ ಕಾಲೇಜು ಹಂಚಿಕೆಯಾಗಿ ಶುಲ್ಕ ಪಾವತಿಸದೇ ಇರುವ ಅಭ್ಯರ್ಥಿಗಳಿಗೆ ಎರಡನೇ ಸುತ್ತಿನ ಸೀಟು ಹಂಚಿಕೆಯು ಕೊನೆಯ ಅವಕಾಶವಾಗಿರುತ್ತದೆ.

7. ಆಯ್ಕೆ ಪಟ್ಟಿ ಪ್ರಕಟಣೆಯಾದ ನಂತರ **ಒಂದೆರಡು ಕಾಲೇಜುಗಳಲ್ಲಿ** ಸರ್ಕಾರಿ ಕೋಟಾದ ಸೀಟುಗಳ ಸಂಖ್ಯೆ ಕಡಿಮೆಯಾಗಿದ್ದು, ಪಟ್ಟಿಯಂತೆ ಹಂಚಿಕೆ ಮಾಡಿದ್ದ ಅಭ್ಯರ್ಥಿಗಳಿಗೆ ಮುಂದಿನ ಎರಡು ಸುತ್ತುಗಳ ಸೀಟು ಹಂಚಿಕೆ ಪ್ರಕ್ರಿಯೆಗೆ ಅವಕಾಶ ನೀಡಲಾಗುವುದು.

**ದಾಖಲಾತಿ ಶುಲ್ಕ ಪಾವತಿಸುವ ಬಗ್ಗೆ:**

1) ಕೆಲವು ಅಭ್ಯರ್ಥಿಗಳು ಆನ್ ಲೈನ್ ಶುಲ್ಕ ಪಾವತಿಸಿದ ನಂತರ ನಮಗೆ ಶುಲ್ಕ ಸಂದಾಯ ಆಗಿರುವ ಬಗ್ಗೆ ಮಾಹಿತಿ ಬರುತ್ತಿಲ್ಲ ಎಂದು ಮನವಿಗಳನ್ನು ಸಲ್ಲಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಈ ರೀತಿ ಶುಲ್ಕ ಪಾವತಿಯಲ್ಲಿ ಗೊಂದಲ ಆಗಿರುವ ಬಗ್ಗೆ ಅಭ್ಯರ್ಥಿಗಳು ಆತಂಕ ಪಡುವ ಅಗತ್ಯವಿಲ್ಲ.

2) ಆನ್ ಲೈನ್ ಮೂಲಕ ದಾಖಲಾತಿ ಶುಲ್ಕ ಪಾವತಿಸುತ್ತಿರುವುದರಿಂದ ಬ್ಯಾಂಕ್ ನಿಂದ ಸಿ.ಎ.ಸಿಗೆ ಸಂದಾಯವಾಗಲು ಕನಿಷ್ಟ 24 ಗಂಟೆಗಳ ಸಮಯಾವಕಾಶ ತೆಗೆದುಕೊಳ್ಳುವುದರಿಂದ ಶುಲ್ಕದ ಮೊತ್ತವು ಅಭ್ಯರ್ಥಿಯ ಖಾತೆಯಿಂದ Debit ಆದರೆ ಆತಂಕಪಡದೇ ಒಂದು ದಿನ (24 ಗಂಟೆ) ಕಾಯುವುದು. ಆನಂತರವೂ ಶುಲ್ಕ ಪಾವತಿ ಬಗ್ಗೆ ಗೊಂದಲವಿದ್ದಲ್ಲಿ, ಸಿ.ಎ.ಸಿ ಕಛೇರಿ ದೂರವಾಣಿಗೆ ಸಂಪರ್ಕಿಸುವುದು. ಅಥವಾ ಸಂಬಂಧಪಟ್ಟ ಪರಿಶೀಲನಾ ಕೇಂದ್ರದ ನೋಡಲ್ ಅಧಿಕಾರಿಗಳ ಗಮನಕ್ಕೆ ತರುವುದು.

**ಸಹಿ/-**

**ವಿಶೇಷಾಧಿಕಾರಿ**